# ಸಂಗೀತ ಕಲಾರತ್ನ ಸೂರ್ಯ ಪ್ರಸಾದ್

ಪ್ರತಿಷ್ಠಿತ ಸಂಗೀತ ಸಭೆ 'ಬೆಂಗಳೂರು ಗಾಯನ ಸಮಾಜ'ದ 51ನೇ ಸಂಗೀತ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಸಂಗೀತ ವಿಮರ್ಶಕ ಎಂ. ಸೂರ್ಯ ಪ್ರಸಾದ್ ಅವರಿಗೆ ಡಿಸೆಂಬರ್ 12ರಂದು 'ಸಂಗೀತ ಕಲಾರತ್ನ' ಬಿರುದಿನ ಸಮ್ಮಾನ.

■ ಯು.ಎ.

ತಾಯಿ ಎಂದರೆ ಮಮತೆ, ವಾತ್ಸಲ್ಯಗಳ ಸಾಕಾರಮೂರ್ತಿ ಎಂಬುದು ಸಾಮಾನ್ಯ ವಿಶೇಷಣ. ಆದರೆ ಸಂಗೀತದ ಮಟ್ಟಿಗೆ ತಾಯಿ ಎಂದರೆ ಅಪ್ಪಟ ವಿದ್ಯಾಧಿದೇವತೆ ಸರಸ್ವತಿಯೇ. ಸಂಗೀತ ವಿಮರ್ಶಕ ಎಂ. ಸೂರ್ಯ ಪ್ರಸಾದ್ ಮಟ್ಟಿಗಂತೂ ಈ ಮಾತು ಸರಿಯಾಗಿ ಒಪ್ಪುತ್ತದೆ.

ಒಂದು ನೈಜ ಹಾಗೂ ತಾಜಾ ಉದಾಹರಣೆ ನೋಡಿ. ಸೂರ್ಯ ಪ್ರಸಾದ್ ಪುಟಾಣಿಯಾಗಿದ್ದಾಗ ಆತನಿಗೆ ಸಂಗೀತ ಕಲಿಸಬೇಕೆಂಬುದು ಇವರ



ತಾಯಿಯ ಹೆಬ್ಬಯಕೆಯಾಗಿತ್ತು. ಏಕೆಂದರೆ ಇವರ ಮನೆತನವೇ ಸಂಗೀತದ್ದು. ಮಗನಿಗೆ ಸಂಗೀತ ಸಂಸ್ಕಾರ ನೀಡಬೇಕು ಎಂಬ ಕಾರಣಕ್ಕೆ ತಾಯಿ ಸುಬ್ಬಲಕ್ಷ್ಮಮ್ಮ ನಸುಕಿನಲ್ಲೇ ಎಬ್ಬಿಸಿ 'ಬಾ ನಿಂಗೆ ಇಷ್ಟವಾದ ಬಿಸಿ ಬಿಸಿ ಕಾಫಿ ಮಾಡಿ ಕೊಡ್ತೀನಿ' ಅಂತ ರಮಿಸಿ ಶ್ರುತಿ ಬಾಕ್ಸ್ ಆನ್ ಮಾಡಿಟ್ಟು ಕಾಫಿ ಮಾಡಿ ತಂದು ಕೊಟ್ಟು ಸಂಗೀತ ಕಲಿಸುತ್ತಿದ್ದರು. ಹೀಗೆ ತಾಯಿಯ ಮಡಿಲಲ್ಲೇ ಸಂಗೀತದ ಸ ರಿ ಗ ಮ ಪ ಕಲಿತ ಸೂರ್ಯ ಪ್ರಸಾದ್, ಮುಂದೆ ಬದುಕಿನುದ್ದಕ್ಕೂ ಸಂಗೀತದಲ್ಲಿ ವ್ಯವಸಾಯ ಮಾಡಿದರು. ಸಂಗೀತಗಾರ, ಪಿಟೀಲು ವಾದಕ, ಪ್ರಾಧ್ಯಾಪಕ, ಸಂಪನ್ಮೂಲ ವ್ಯಕ್ತಿ, ಸಂಗೀತ ವಿಮರ್ಶಕ, ಬೋಧಕ.. ಹೀಗೆ ಹತ್ತು ಹಲವು ವಿಶೇಷಣಗಳನ್ನು ಮಡಿಲಲ್ಲಿ ತುಂಬಿಕೊಂಡರು.


ಮೂಲತಃ ಬೆಂಗಳೂರಿನವರಾದ ಅವರ ತಂದೆ ದಿ. ಎಸ್.ಎನ್. ಅಶ್ವಥನಾರಾಯಣ ಶಾಸ್ತ್ರೀ ಭಜನೆ ಗಾಯಕರು, ತಾಯಿ ದಿ.ಎಸ್. ಸುಬ್ಬಲಕ್ಷ್ಮಮ್ಮ ಹಾರ್ಮೋನಿಯಂ ವಾದಕಿ, ಗಾಯಕಿ. ತಾಯಿಯೇ ಇವರ ಸಂಗೀತ ಕಾರ್ಯಕ್ಕೆ ಸ್ಫೂರ್ತಿ. ಮುಂದೆ ಪಿಟೀಲು ಕಲಿಕೆಯನ್ನು ವಿದ್ವಾನ್ ಎಂ. ಶಂಕರಪ್ಪ ಅವರಲ್ಲಿ ಕಲಿತು ಮುಂದೆ ಆನೂರು ರಾಮಕೃಷ್ಣ ಅವರಲ್ಲೂ ಕಲಿತವರು. ವಿದ್ವಾನ್ ಬೆಳಕವಾಡಿ ವರದ ರಾಜಯ್ಯಂಗಾರ್ ಅವರಲ್ಲಿ ಕರ್ನಾಟಕ ಶಾಸ್ತ್ರೀಯ ಗಾಯನ, ಪಂ. ಶೇಷಾದ್ರಿ ಗವಾಯಿ ಅವರಲ್ಲಿ ಹಿಂದೂಸ್ತಾನಿ ಸಂಗೀತ ಕಲಿತರು.

ನೃತ್ಯದ ಮಾರ್ಗದರ್ಶನವನ್ನು ವಿದುಷಿ ಮಾಯಾ ರಾವ್ ಅವರಲ್ಲಿ ಪಡೆದುಕೊಂಡರು. ಮಾಯಾ ರಾವ್ ಅವರ ಪತಿ ನಟರಾಜನ್ ಅವರೊಡನೆ ಹೆಚ್ಚಿನ ಒಡನಾಟ ಇಟ್ಟುಕೊಂಡಿದ್ದ ಇವರು, ಭರತನಾಟ್ಯ, ಕೂಚುಪುಡಿ, ಕಥಕ್ ನೃತ್ಯದ ಬಗ್ಗೆ ಹೆಚ್ಚಿನ ಮಾಹಿತಿ ಪಡೆದು ಸಂಗೀತ–ನೃತ್ಯ ಎರಡರಲ್ಲೂ ಜ್ಞಾನ ಸಂಪಾದಿಸಿಕೊಂಡರು. ಎಪ್ಪತ್ತರ ದಶಕಗಳಲ್ಲೇ ಆಕಾಶವಾಣಿ ಹಾಡುತ್ತಿದ್ದುದಲ್ಲದೆ ಆ ಕಾಲದಲ್ಲಿ ಪ್ರಖ್ಯಾತಿಯಾಗಿದ್ದ ನೀಲ್‌ಕಮಲ್ ಆರ್ಕೆಸ್ಟ್ರಾ ಕಂಪೆನಿ ಮೂಲಕ ಅನೇಕ ಹಾಡುಗಳನ್ನೂ ಹಾಡಿದರು.

ಓದಿದ್ದು ಬೆಂಗಳೂರಿನ ವಿಜಯಾ ಕಾಲೇಜಿನಲ್ಲಿ ಹಿಂದಿ ಎಂಎ. ಅದರಲ್ಲೂ ಚಿನ್ನದ ಪದಕ ಪಡೆದು, ಸಂತ ಸೂರ್‌ದಾಸ್ ಬಗ್ಗೆ ಪಿಎಚ್‌ಡಿ ಮಹಾಪ್ರಬಂಧ ಬರೆದು ಡಾಕ್ಟರೇಟ್ ಪಡೆದರು. ಮುಂದೆ ಆಂಗ್ಲ ಪತ್ರಿಕೆ ದಿ ಹಿಂದೂ ಹಾಗೂ ಸಂಯುಕ್ತ ಕರ್ನಾಟಕ ಪತ್ರಿಕೆಗಳಿಗೆ ಸಂಗೀತ ವಿಮರ್ಶೆ ಬರೆಯಲಾರಂಭಿಸಿದರು. ಅದಾಗಿ ಪ್ರಜಾವಾಣಿಯಲ್ಲಿ ಸಂಗೀತಜ್ಞ ಬಿವಿಕೆ ಶಾಸ್ತ್ರಿ ಜೊತೆಗೆ ಸೂರ್ಯ ಪ್ರಸಾದ್ ಕೂಡ ಸಂಗೀತ ವಿಮರ್ಶೆ ಬರೆದರು. ಸುಮಾರು 4000ಕ್ಕೂ ಹೆಚ್ಚು ಸಂಗೀತ ವಿಮರ್ಶೆ, ಕಲಾ ರಸಪ್ರಶ್ನೆ ಎಂಬ ಅಂಕಣ ಬರೆದರು. ಹಿಂದಿ, ತೆಲುಗು ಭಾಷೆಗಳಲ್ಲೂ ವಿವಿಧ ಪತ್ರಿಕೆಗಳಿಗೆ ಬರೆದರು. ಸಂಗೀತ ಮತ್ತು ನೃತ್ಯ ಶಿಬಿರಗಳು, ಕಾರ್ಯಾಗಾರ ಗಳು, ಸೋದಾಹರಣ ಭಾಷಣಗಳನ್ನು ಪ್ರಸ್ತುತಪಡಿಸಿದರು. ಸಾಗರದಾಚೆಗೂ ಅನೇಕ ಸಂಗೀತ ಶಿಬಿರ, ಕಾರ್ಯಾಗಾರಗಳಲ್ಲಿ ತರಬೇತಿ, ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು.

ಶಾಸ್ತ್ರೀಯ ಸಂಗೀತವನ್ನು ಉಳಿಸಿ ಬೆಳೆಸುವಲ್ಲಿ ಬೆಂಗಳೂರು ಗಾಯನ ಸಮಾಜದ ಕೊಡುಗೆ ಅನನ್ಯ. ಪ್ರತಿವರ್ಷ ಸಂಗೀತ ಸಮ್ಮೇಳನ ಆಯೋಜಿಸಿ ಸಂಗೀತ ಕಛೇರಿ ನಡೆಸುತ್ತಿರುವುದು ಸ್ತುತ್ಯರ್ಹ. ■

ವಶೀಕರಣ ಸ್ಪೆಷಲಿಸ್ಟ್



ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ
ಗುರೂಜಿ ಮಹೇಶ್‌ಭಟ್

ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನನ್ನು ಸಾಗಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ
"ಗುರೂಜಿ ಮಹೇಶ್‌ಭಟ್"
ಇವರಿಂದ ಮಾತ್ರ ಈ ಸಾಧನೆ ಸಾಧ್ಯ

ಇವರು ಕೇರಳ ಬಂಗಾಳಿ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.

ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಂಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಭಾದೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.

ವಿಶೇಷ ಸೂಚನೆ: ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.

ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.
ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.
ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ, ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ

ಗುರೂಜಿ ಮಹೇಶ್‌ಭಟ್
9686999517